ಸಂ.ಪವಕನಿ/ಇಡಿ-4/ಸಿ:ಆರ್ -2016/17

ನಿರ್ದೇಶಕರ ಕಛೇರಿ,
ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ,
ಕೃಷಿ ಭವನ ,2ನೇ ಮಹಡಿ,
ಬೆಂಗಳೂರು, ದಿನಾಂಕ: 23/08/2016

ಜಂಟಿ ನಿರ್ದೇಶಕರು/ಉಪ/ನಿರ್ದೇಕರು,
ಯೋಜನಾ ಸಮನ್ವಯಧಿಕಾರಿಗಳು,
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ,
ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು,
.......................................ಜಿಲ್ಲೆ.

ಮಾನ್ಯರೇ,

ವಿಷಯ : 2016-17 ನೇ ಸಾಲಿಗೆ ಪರಿಶಿಷ್ಟ ವರ್ಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು 2016-17 ನೇ ಸಾಲಿಗೆ NSP ಮೂಲಕ ಅನುಷ್ಟಾನಗೊಳಿಸುವ ಬಗ್ಗೆ.

<><><>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ NSP ನಲ್ಲಿ ಹಿಂದಿನ ಶೈಕ್ಷಣಿಕ ವರ್ಷ 2015-16 ನೇ ಸಾಲಿನಲ್ಲಿ ಪ್ರಾರಂಭಿಸಲಾಗಿರುವುದು, ಸರಿಯಷ್ಟೆ ಪ್ರಸಕ್ತ ಶೈಕ್ಷಣಿಕ ವರ್ಷ 2016-17 ನೇ ಸಾಲಿನಲ್ಲಿ NSP ವೆಬ್ ಸೈಟ್ ಅನ್ನು ಹೊಸ ಆವೃತ್ತಿಯೊಂದಿಗೆ ಭಾರತ ಸರ್ಕಾರವು ಪ್ರಾರಂಭಿಸಿರುವ ಕಾರಣ ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

1) ಯಾವುದಾದರು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ವಿದ್ಯಾರ್ಥಿಯ ಉಳಿತಾಯ ಖಾತೆಯನ್ನು ತೆರೆಯುವುದು.
2) ಆಧಾರ್ ಕಾರ್ಡ ಸಂಖ್ಯೆ ನಮೂದಿಸುವುದು ಕಡ್ಡಾಯಗೊಳಿಸಲಾಗಿದೆ.
3) ವಿದ್ಯಾರ್ಥಿಗಳು ಬ್ಯಾಂಕಿನ ಉಳಿತಾಯ ಖಾತೆಗೆ ತಮ್ಮ ಆಧಾರ್ ಸಂಖ್ಯೆಯನ್ನು ಜೋಡಿಸಿಕೊಳ್ಳುವುದು .ಆಧಾರ್ ಸಂಖ್ಯೆ ಜೋಡಣೆ ಇಲ್ಲದೆ ಇರುವ ಬ್ಯಾಂಕಿನ ಉಳಿತಾಯ ಖಾತೆನ್ನು ಪರಿಗಣೆಸಲಾಗುವುದಿಲ್ಲ
4) ವಿದ್ಯಾರ್ಥಿಗಳು ಅರ್ಜಿಸಲ್ಲಿಸುವಾಗ ಶುಲ್ಕ ನಮೂದಿಸುವುದನ್ನು ಕಡ್ಡಾಯಗೊಳಿಸಿರುವುದರಿಂದ ಸಂಬಂಧಪಟ್ಟ ತಾಲ್ಲೂಕು/ಜಿಲ್ಲಾಮಟ್ಟದ ಅನುಷ್ಠಾನಾಧಿಕಾರಿಗಳು ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ತಿರಸ್ಕರಿಸುವ/ಅನುಮೋದಿಸುವ ಮೊದಲು ಮೂಲ ದಾಖಲಾತಿಯೊಂದಿಗೆ ಪರೀಶಿಲಿಸಿ ಖಾತ್ರಿ ಮಾಡಿಕೊಳ್ಳುವುದು.
5) ವೆಬ್‌ಸೈಟ್ ವಿಳಾಸ https://scholarships.gov.in/ ನಲ್ಲಿ ಮಾತ್ರ ಅರ್ಜಿಗಳನ್ನು ಸ್ವಿಕರಿಸಲಾಗುವುದು.
6) ಹೊಸದಾಗಿ ಅರ್ಜಿಸಲ್ಲಿಸಲು "new user ? Register now" ಎಂಬ ಗುಂಡಿಯ ಮೇಲೆ ಕ್ಲಿಕ್ ಮಾಡುವುದು ಹಾಗೂ 2015-16 ನೇ ಸಾಲಿನಲ್ಲಿ NSP ಯಲ್ಲಿ (Fresh and Renewal) ಎಂದು ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಕೂಡ 2016-17 ನೇ ಸಾಲಿಗೆ ಹೊಸದಾಗಿ ಅರ್ಜಿಯನ್ನು ಸಲ್ಲಿಸ ತಕ್ಕದು.
7) 2016-17ನೇ ಸಾಲಿಗೆ Renewal ವಿದ್ಯಾರ್ಥಿಗಳನ್ನು Fresh ಎಂದು ಪರಿಗಣಿಸಲಾಗುವುದು.

8) ಎಲ್ಲಾ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ಇಲಾಖೆಯ ಸೂಚನಾ ಫಲಕದಲ್ಲಿ , ಪ್ರಾದೇಶಿಕ ದಿನ ಪತ್ರಿಕೆಗಳಲ್ಲಿ ಮತ್ತು ಸಂಬಂಧಪಟ್ಟ ಶಾಲಾ ಕಾಲೇಜುಗಳಿಗೆ ಪತ್ರದ ಮೂಲಕ NSPನಲ್ಲಿ ಅರ್ಜಿ ಆಹ್ವಾನಿಸಲು ಕ್ರಮ ವಹಿಸುವುದು.

9) ಹೊಸದಾಗಿ ಶಾಲಾ ಕಾಲೇಜು ಮತ್ತು ಕೋರ್ಸಗಳನ್ನು ಸೇರಿಸಲು District login ನಲ್ಲಿ ಅವಕಾಶ ಕಲ್ಪಿಸಲಾಗುವುದು.

10) ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಕಡೆಯ ದಿನಾಂಕವು 30/09/2016.

11) 2015–16 ನೇ ಸಾಲಿನಲ್ಲಿ ಅಭ್ಯರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಸಲ್ಲಿಸಿದ್ದು, ತಿರಸ್ಕರಗೊಂಡ ಅರ್ಜಿಗಳು ವಿದ್ಯಾರ್ಥಿ ವೇತನ ಬಿಡುಗಡೆಯಾಗದ ಪಕ್ಷದಲ್ಲಿ , ಶಾಶ್ವತ ನಂಬರ್ ಜನರೇಟ್ ಆಗಿದ್ದರೆ, ಅಂತಹ ಅರ್ಜಿಗಳನ್ನು ಸಂಬಂಧಪಟ್ಟ ಮೂಲ ದಾಖಲೆಯೊಂದಿಗೆ ಪರಿಶೀಲಿಸಿ ಸರಿ ಇದ್ದಲ್ಲಿ, ಡೌನ್ ಲೋಡ್ ಮಾಡಿರುವ ಪಟ್ಟಿಯಲ್ಲಿ ಇಂತಹ ಅರ್ಜಿಗಳನ್ನು ಸಹಾ ನಮೂದಿಸಿ ವಿದ್ಯಾರ್ಥಿವೇತನ ಬಿಡುಗಡೆ ಮಾಡುವುದು.

12) ಅರ್ಜಿ ಸಲ್ಲಿಸುವಾಗ ಯಾವುದೆ ತಾಂತ್ರಿಕ ತೊಂದರೆಗಳು ಉಂಟಾದಲ್ಲಿ ಸಹಾಯವಾಣಿ: 0120–6619540 ಮತ್ತು ಇಮೇಲ್ ವಿಳಾಸ nspdirectorst@gmail.com Or stwelfare@gmail.com ನ್ನು ಸಂಪರ್ಕಿಸುವುದು.

- **Name's of the ST scholarships scheme's**

1) Umbrella Scheme for Education of ST Childern - Pre-Metric Scholarship (class IX and X) for ST Students
2) Umbrella Scheme for Education of ST Childern - Post-Metric Scholarship for ST Students
3) National Fellowship and Scholarship for Higher Education of ST Students - Scholarship (Formally Top Class Education for Schedule Tribe Students)
4) National Fellowship and Scholarship for Higher Education of ST Students - Scholarship (Formally Rajiv Gandhi National Fellowship for ST Students)

ತಮ್ಮ ನಂಬುಗೆಯ,

ನಿರ್ದೇಶಕರು.
ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ,
ಬೆಂಗಳೂರು.